# ಗೋಡೆಗೆ ಬಾಯಿ ಇದ್ದಿದ್ದರೆ

■ ಪಿ.ಪಿ. ಉಪಾಧ್ಯ

ಮಳೆಗಾಲದ ಸುರುವಿನ ದಿನಗಳು. ವೆಂಕಪ್ಪಯ್ಯನ ಮನೆ, ಮನೆಯೆಂದರೇನು ಮಣ್ಣಿನ ಗೋಡೆ ಮತ್ತು ಹುಲ್ಲಿನ ಮಾಡಿನ ಎರಡು ಕೋಣೆಯ ಆ ಗುಡಿಸಿಲಿನ ಪಶ್ಚಿಮ ದಿಕ್ಕಿನ ಗೋಡೆ ಮಾಮೂಲಿಯಂತೆ ಬಿದ್ದುಬಿಟ್ಟಿತ್ತು. ಈ ಗೋಡೆಯನ್ನು ಬೀಳಿಸುವ ಸಲುವಾಗಿಯೇ ಬಂದಿತ್ತೇನೋ ಎನ್ನುವಂತೆ ರಾತ್ರಿಯಿಡೀ ಸುರಿದ ಮಳೆ ಈಗ ಹೊಳೆಯಾಗಿತ್ತು.  ಸೂರ್ಯನ ಬಿಸಿಲೂ ಬೀಳತೊಡಗಿತ್ತು. ವೆಂಕಪ್ಪಯ್ಯ ಆ ಬಿದ್ದ ಗೋಡೆಯ ಮಣ್ಣನ್ನೇ ಪುನಃ ಪುನಃ ಕಲಿಸಿ ಗೋಡೆ ಎತ್ತುತ್ತಿದ್ದರು. 'ಅವಳಿದ್ದಿದ್ದರಾದರೂ ಮಣ್ಣನ್ನು ಎತ್ತಿಕೊಡಲಿಕ್ಕಾದರೂ ಆಗುತ್ತಿತ್ತು. ಛೇ.. ಎಷ್ಟು ಹೇಳಿದರೂ ಕೇಳದೆ ಮಗನ ಮನೆಗೆ ಹೋಗಿದ್ದಾಳೆ. ಅವಳಿಗೆ ಬುದ್ಧಿ ಬರುವುದಾದರೂ ಯಾವಾಗಲೋ' ಎಂದುಕೊಳ್ಳುತ್ತ ಮಣ್ಣನ್ನು ಎತ್ತೆತ್ತಿ ಗೋಡೆಯನ್ನು ಕಟ್ಟುತ್ತಲೇ ಇದ್ದರು. ಮುದಿ ಕೈಗಳು ಸೋಲುತ್ತಿದ್ದರೂ ಅಭ್ಯಾಸ ಬಲ ಕೆಲಸವನ್ನು ಮುಂದುವರಿಸಿತ್ತು.

ಎಷ್ಟು ಸಲವಾಯ್ತೋ ಈ ಗೋಡೆಯನ್ನು ಹೀಗೆ ಕಟ್ಟಿದ್ದು. ಒಂದು ಮಳೆ ಪಡುವಿನಿಂದ ಹೊಡೆಯಿತೆಂದರೆ ಮುಗಿಯಿತು. ಹೊಸ ಗೋಡೆ ತಯಾರಾಗಬೇಕೆಂದೇ ಅರ್ಥ. ಮಳೆಗಾಲ ಆರಂಭವಾಗುವುದರ ಮೊದಲೇ ಮಡಲಿನ ಮರೆಯೊಂದನ್ನು ಕಟ್ಟಬೇಕು. ಗೋಡೆ ಬೀಳಲು ಬಿಡಬಾರದು ಎಂದು ಅದೆಷ್ಟು ಬಾರಿ ಆಲೋಚಿಸಿರಲಿಲ್ಲ ಅವರು. ಪ್ರತಿ ಸಲ ಹೀಗೆ ಗೋಡೆ ಎತ್ತುವಾಗಲೂ ಮುಂದಿನ ವರ್ಷ ಹೀಗಾಗಲು ಬಿಡಬಾರದೆಂದು ಆಲೋಚಿಸುವುದು. ಆದರೆ ಬ್ರಾಹ್ಮಣಾರ್ಥದ ಊಟ ಹುಡುಕುತ್ತ ತಿರುಗುವ ಬ್ರಾಹ್ಮಣನಿಗೆ ಅಷ್ಟು ವ್ಯವಧಾನವಾದರೂ ಎಲ್ಲಿ? ಗೋಡೆ ಹೀಗೆ ಬಿದ್ದುಹೋದ ಮೇಲೆ ಬೇರೆ ದಾರಿಯೇ ಇಲ್ಲದೆ ಹೊಸದನ್ನು ಕಟ್ಟುವುದು ಮತ್ತು ಅದಕ್ಕೆ ನೀರು ಬೀಳದಂತೆ ಮಡಲಿನ ಮರೆಯನ್ನು ಕಟ್ಟುವುದು.

ಗೋಡೆ ಕಟ್ಟುವಾಗ ಆ ಮಣ್ಣಿನಲ್ಲಿ ಬೆರೆಯುತ್ತಿದ್ದ ಕಣ್ಣೀರೆಷ್ಟೋ. ಒಂಟಿತನದ ಅಸಹಾಯಕತೆ ದೃಢ ಮನಸ್ಸಿನವರಾದ ವೆಂಕಪ್ಪಯ್ಯನವರ ಕಣ್ಣಿನಲ್ಲೂ ನೀರು ಬರಿಸುತ್ತಿತ್ತು. ಜತೆಗೇ ತಿರು ತಿರುಗಿ ಉಪಯೋಗಿಸುತ್ತಿದ್ದ ಆ ಮಣ್ಣು ನೆನಪಿಸುತ್ತಿದ್ದ ಹಲವಾರು ಕಥೆಗಳು ಅವರನ್ನು ಇನ್ನಷ್ಟು ಆರ್ತರನ್ನಾಗಿ ಮಾಡುತ್ತಿದ್ದುವು. ಹಾಗಾದಾಗೆಲ್ಲ ಗೋಡೆಯ ಮೇಲಿಟ್ಟ ಮಣ್ಣನ್ನು ಹಿಸುಕುತ್ತಲೇ ಇರುತ್ತಿದ್ದರು ಮತ್ತು ತದೇಕಚಿತ್ತರಾಗಿ ಅದನ್ನೇ ನೋಡುತ್ತ ಕಣ್ಣೀರನ್ನು ಹರಿಸುತ್ತಿದ್ದರು.

ಯಾರಾದರೂ ನೋಡಿಯಾರು, ಕಣ್ಣೀರನ್ನು ಒರೆಸಿಕೊಳ್ಳಬೇಕು ಎಂಬುದು ಮನಸ್ಸಿಗೆ ಬಂದರೂ ಮರು ನಿಮಿಷವೇ ಯಾರಿದ್ದಾರೆ ನೋಡುವವರು ಎಂದು ಉದಾಸೀನ ಮಾಡುತ್ತಾರೆ. ಅಪರೂಪಕ್ಕೊಮ್ಮೆಯಾದರೂ ಊಟ ಮಾಡಿ, ಕಾಫಿ ಕುಡಿಯಿರಿ ಎಂದು ಹೇಳುತ್ತಿದ್ದ ಹೆಂಡತಿಗೂ ಈ ಮನೆಯಲ್ಲಿ ಇರಲು ಆಗುವುದಿಲ್ಲ. ಪದೇ ಪದೇ ಅವಮರ್ಯಾದೆ ಮಾಡಿಸಿಕೊಂಡೂ ಅದೇ ಮಗನ ಮನೆಗೆ ಹೋಗುತ್ತಾಳೆ. `ಮಗ ನಮ್ಮವನಾದರೂ ಸೊಸೆ ನಮ್ಮವಳೇ' ಎಂದು ಮುಸಿ ಮುಸಿ ಅಳುವವಳೂ ಅವಳೇ. ಮುಖಭಂಗ ಮಾಡಿಸಿಕೊಂಡು ಬಂದ ನಾಲ್ಕೇ ದಿನಕ್ಕೆ ಪುನಃ ಹೊರಟು ನಿಲ್ಲುವವಳೂ ಅವಳೇ. 'ಕೊನೆಗಾಲಕ್ಕೆ ಎಂತಿದ್ದರೂ ಆಗುವವನು  ಅಲ್ಲ  ಆಗಬೇಕಾದವನು ಅವನೇ ಅಲ್ಲವೇ' ಎಂದು ಚಡಪಡಿಸುತ್ತ ಹೊರಟೇ ಬಿಡುತ್ತಾಳೆ. ಇಲ್ಲಿ ವೆಂಕಪ್ಪಯ್ಯ ಈ ಇಳೀ ವಯಸ್ಸಿನಲ್ಲು ಕೈ ಬಾಯಿ ಸುಟ್ಟುಕೊಳ್ಳುತ್ತ ಅಡಿಗೆ ಮಾಡಿಕೊಂಡು ಉಣ್ಣಬೇಕು. ಕೇಳಿದರೆ ಹೇಳಿಯಾಳು `ವಾರಕ್ಕೆ ನಾಲ್ಕು ದಿನ ಬ್ರಾಹ್ಮಣಾರ್ಥದ ಕೂಳು ಕತ್ತರಿಸಲು ಹೋಗುವವರಿಗೆ ಮನೆಯಲ್ಲಿ ಯಾರಿದ್ದರೆಷ್ಟು ಬಿಟ್ಟರೆಷ್ಟು' ಎಂದು. ಹಾಗಾಗಿ ಈಗೀಗ ವೆಂಕಪ್ಪಯ್ಯ ಕೇಳುವುದನ್ನೂ ಬಿಟ್ಟಿದ್ದಾರೆ.

ಹಾಗೆ ಹೋದ ತಾಯಿಯನ್ನು ಪ್ರತಿ ಸಾರಿ ವಾಪಾಸು ಕರೆತಂದು ಬಿಡಲು ಬಂದಾಗಲೂ ಮಗ ಹೇಳುತ್ತಾನೆ. 'ಅಪ್ಪ, ಅಮ್ಮನಿಗೆ ಸ್ವಲ್ಪ ಬುದ್ಧಿ ಹೇಳಬಾರದಾ .. ಪ್ರಪಂಚ ಬದಲಾದ ಹಾಗೆ ನಾವೂ ಬದಲಾಗಬೇಕು. ಅದು ಬಿಟ್ಟು ನಾವು ಇನ್ನೂ ಹಳೇ ಕ್ರಮದಲ್ಲಿಯೇ ಇದ್ದರೆ ಹೇಗೆ. ನನ್ನ ಹೆಂಡತಿ ಮಕ್ಕಳು ಈಗಿನವರು. ಅಮ್ಮ ಅವರಿಗೆ ಒಗ್ಗಿಕೊಳ್ಳಬೇಕು' ಎಂದು. ಅವನು ಹಾಗೆ ಹೇಳುವಾಗ ವೆಂಕಪ್ಪಯ್ಯ ಮಾತಾಡುವುದಿಲ್ಲ. ಬದಲಿಗೆ ಗೋಡೆಯತ್ತ ನೋಡುತ್ತಾರೆ. ಅವರೇ ಎತ್ತಿ ಕಟ್ಟಿದ ಗೋಡೆ. ನೂರಾರು ಕಥೆಗಳನ್ನು ಹೇಳುತ್ತದೆ. ಹಾಗೆ ಅವರು ಗೋಡೆಯನ್ನು ನೋಡುತ್ತ ಮಾತಾಡದೇ ಇರುವಾಗಲೇ ಅವ 'ಸರಿ ನನಗೆ ಬಸ್ಸಿಗೆ ಹೊತ್ತಾಯ್ತು' ಎಂದು ಹೇಳುತ್ತ ಅವನೊಂದಿಗೆ ಆಗಷ್ಟೆ ಬಂದಿದ್ದ ಅಮ್ಮ ಗಡಿಬಿಡಿಯಲ್ಲಿ ಮಾಡಿದ ಅಡುಗೆಯನ್ನು ಉಂಡ ಶಾಸ್ತ್ರ ಮಾಡಿ ಹೊರಟೇ ಬಿಡುತ್ತಿದ್ದ.